
ಶಿವಮೊಗ್ಗ ನಿವಾಸಿಯಾಗಿದ್ದ ನಾನು ಹೊಸ ಕಸುಬಿನ ದೆಸೆಯಿಂದ ಹಂಪಿ ಸೀಮೆಗೆ ವಲಸೆ ಬರಬೇಕಾಯಿತು. ಆಗ ನಾವು ಹೊಸಪೇಟೆ ಪಟ್ಟಣದಲ್ಲಿ ಬಾಡಿಗೆ ಮನೆ ಹಿಡಿದೆವು. ಮನೆಯ ಮಾಲೀಕರು ಕಡಪಾ ಕಡೆಯ ತೆಲುಗರಾಗಿದ್ದು ಸಜ್ಜನರಾಗಿದ್ದರು. ನಮ್ಮ ಅವರ ಸಂಬಂಧವು ಹಿತ್ತಲಗಿಡಕ್ಕೆ ಹೊರನಾಡಿನ ಹಕ್ಕಿಯೊಂದು ವಲಸೆಬಂದು ಗೂಡು ಕಟ್ಟಿಕೊಂಡಂತೆ ಮಧುರವಾಗಿತ್ತು. ಇದಕ್ಕೆ ಪೂರಕವಾಗಿ ಅವರ ಕಾಂಪೌಂಡಿನಲ್ಲಿದ್ದ ಸಂಪಿಗೆಮರವು, ತನ್ನದೊಂದು ಕೊಂಬೆಯನ್ನು ನಮ್ಮ ಮಲಗುಕೋಣೆಯ ಕಿಟಕಿಯವರೆಗೂ ಚಾಚಿತ್ತು. ಬಾನು ಬೆಳಬೆಳಿಗ್ಗೆ ಆ ಕೊಂಬೆಯಲ್ಲಿದ್ದ ಹೂಗಳನ್ನೆಲ್ಲ ಹಕ್ಕುದಾರಿಕೆಯಿಂದ ಹರಕೊಳ್ಳುತ್ತಿದ್ದಳು.



ನಮ್ಮ – ಮಾಲೀಕರ ಈ ಹಾಲುಜೇನು ಸಂಬಂಧಕ್ಕೆ ಹುಳಿ ಹಿಂಡಿದ್ದು ನಮ್ಮ ಪಾಕಶಾಲೆಯಿಂದ ಹೊಮ್ಮಿದ ಮೀನ್ ಪರಿಮಳ. ತುಂಗಭದ್ರೆಯು ಹೊಸಪೇಟೆಯನ್ನು ಅರ್ಧಚಂದ್ರಾಕಾರದಲ್ಲಿ ಬಳಸಿ ಹರಿಯುತ್ತದೆಯಷ್ಟೆ. ಇದರ ದೆಸೆಯಿಂದ ಕಡಲನ್ನು ನಾಚಿಸುವಂತಹ ಜಲರಾಶಿಯುಳ್ಳ ಅಣೆಕಟ್ಟೆಯೂ ಅದರ ನೀರುಂಡು ಭರತಿಯಾಗುವ ಕೆರೆಕಟ್ಟೆಗಳೂ ಈ ಸೀಮೆಯಲ್ಲಿವೆ. ಇವು ತಿನ್ನುಣ್ಣುವವರಿಗೆ ಸದಾಕಾಲ ತಾಜಾಮೀನು ಸಿಗುವಂತೆ ಮಾಡಿವೆ. ನಾವು ವಾರಕ್ಕೆ ಎರಡು ಸಲವಾದರೂ ಮೀನುಹುಳಿ ಕುದಿಸಿ ಮುದ್ದೆ ಕಡಿಸುತ್ತಿದ್ದೆವು. ದೊಡ್ಡಮೀನು ಸಿಕ್ಕಾಗ ಮಸಾಲೆ ಹಚ್ಚಿ ತವಾಫ್ರೈ ಮಾಡುತ್ತಿದ್ದೆವು. ಮೀನುಹುಳಿ ಅಂತಹ ಸಮಸ್ಯೆ ಮಾಡಲಿಲ್ಲ. ಆದರೆ ಫ್ರೈಗಳು ಮಸಾಲೆಘಾಟನ್ನು ಬೀಸುಗಾಳಿಯ ದಿಕ್ಕಲ್ಲಿದ್ದ ಮನೆಯೊಡೆಯರ ಮೂಗಿಗೆ ಒಯ್ದು ಮುಟ್ಟಿಸತೊಡಗಿದವು. ಈ ಘಾಟಿಗೆ ಒಡೆಯರ ಮನೆಯಲ್ಲಿದ್ದ ಹೊಸ ತಲೆಮಾರಿನವರಿಂದ ತಗಾದೆಯೇನೂ ಬರಲಿಲ್ಲ. ಆದರೆ ಅಜ್ಜ ಅಜ್ಜಿಯರು ಬೆಚ್ಚಿಬಿದ್ದರು. ಮನೆಕೊಡುವಾಗ ನಾನು ನನ್ನ ಸಮುದಾಯದ ಗುರುತನ್ನು ಸೂಚಿಸುವ ಹೆಸರನ್ನು ಉಪಾಯವಾಗಿ ಕೈಬಿಟ್ಟು, ಊರಹೆಸರುಳ್ಳ ಎರಡನೇ ಭಾಗವನ್ನಷ್ಟೆ ಬರೆದು ಕೊಟ್ಟಿದ್ದೆ. ನನ್ನ ಪೂರ್ಣಹೆಸರು ಮಾಲೀಕರಿಗೆ ಕೆಲವೇ ದಿನಗಳಲ್ಲಿ ಗೊತ್ತಾಯಿತು. ಕೆಮ್ಮಿದರೂ ಸದ್ದಾಗದಂತೆ ಎಚ್ಚರವಹಿಸುವ ನಮ್ಮ ಸಭ್ಯತೆಗೆ ಮಾರುಹೋದ ಅವರು, ಧಾರ್ಮಿಕ ಗುರುತನ್ನು ಅಡಗಿಸಿದ ನನ್ನ ಅಪರಾಧವನ್ನು ಮರೆತುಬಿಟ್ಟರು. ಈಗ ಫ್ರೈವಾಸನೆ ಮಾತ್ರ ಅವರ ಗಂಟಲ ಗಾಣವಾಗಿ ಸಿಕ್ಕಿಕೊಂಡು ಕಂಟಕ ತಂದಿಟ್ಟಿತು. ಸಂಪಿಗೆ ಕಂಪನ್ನು ಕೊಟ್ಟು ಮತ್ಸ್ಯಗಂಧ ಕೊಳ್ಳುವುದು ಅವರಿಗೂ ದುಬಾರಿ ಅನಿಸಿರಬೇಕು. 'ಮನೆಬಿಡಿ' ಎಂದೇನೂ ಅವರು ನೋಟಿಸು ಕೊಡಲಿಲ್ಲ. ಆದರೆ ತಿಂಗಳ ಕಪ್ಪ ಸಲ್ಲಿಸಲು ಹೋದಾಗಲೆಲ್ಲ, ಮನೆ ತಮ್ಮ ಸ್ವಂತ ಬಳಕೆಗೆ ಬೇಕಾಗಿದೆ ಎಂದು ಸೌಮ್ಯ ಛಂದಸ್ಸಿನ ಪಲ್ಲವಿ ನುಡಿಸತೊಡಗಿದರು. ಸಾಹಿತ್ಯ ಮೀಮಾಂಸೆಯಲ್ಲಿ 'ಧ್ವನಿ'ಯ ಪಾಠ ಮಾಡುವ ನನಗೆ ಸದರಿ ಪಲ್ಲವಿಯ ಅರ್ಥ ತಿಳಿಯುವುದು ಕಷ್ಟವಾಗಲಿಲ್ಲ. ಮಾಂಸಾಹಾರಿ